ಹೋಗಲಿ, ಎಷ್ಟೋ ವರ್ಷಗಳ ನಂತರ ಸರಿತಾ ಭೇಟಿಯಾಗಿದ್ದಾಳೆ, ನನ್ನ ಹಳೆಯ ಪ್ರೇಯಸಿ' ಎಂದು ಯೋಚಿಸಿದೆ...

"ನೀವು ಮತ್ತೆ ತಪ್ಪು ದಾರಿ ಹಿಡಿದಿರಿ. ಥಿಯೇಟರಿನ ಬಗೆಗಿದ್ದ ನನ್ನ ಆಸಕ್ತಿ, ಒಂದು ಕಾಲದಲ್ಲಿ ನನ್ನ ತಲೆಗೇರಿದ್ದ ನನ್ನ ಹುಚ್ಚುತನ – ಇದನ್ನೆಲ್ಲಾ ನಾನು ಪೂರೈಸಬೇಕು. ಸರಿ, ಜೀವನದಲ್ಲಿ ಸಹ ಒಂದು ನಾಟಕವಾಡೋಣ."

ಮೊದಲ ಬಾರಿಗೆ ನಾನು ಸೂಕ್ತ ವ್ಯಕ್ತಿಗಳನ್ನು ಭೇಟಿಯಾಗುತ್ತಿರುವೆ ಎಂದು ಅನ್ನಿಸಿತು. ದೇವಪ್ರಕಾಶ್ ನನಗಿಂತ ಒಂದು ವರ್ಷ ಚಿಕ್ಕವನಿರಬೇಕು. ಅವನು ಏಕ್‌ದಮ್ ಫಿಟ್ ಆಗಿದ್ದ. ಟೀಶರ್ಟ್ ಮತ್ತು ಜೀನ್ಸ್ ಧರಿಸಿದ್ದ ಅವನು ನಮ್ಮನ್ನು ಭೇಟಿಯಾಗಲು ಹೊರಗೆ ಬಂದ. ಲಾಲಾನ ಮಾತಿಗೆ ನಾನು ಓವರ್ ಸೈಸ್ಡ್ ಕುರ್ತಾ ಮತ್ತು ಪೈಜಾಮವನ್ನು ಧರಿಸಿ ಏಕೆ ಬಂದೆನೋ ಎಂದು ದುಃಖವಾಯಿತು. ನನ್ನ ಸಾಮರ್ಥ್ಯ ಜಾತಿ ಮತ್ತು ವರ್ಚಸ್ಸನ್ನು ತೋರಿಸಲು ನಾನು ಉತ್ಸುಕನಾದೆ. ಈಗ ನನ್ನ ಜೊತೆಯಲ್ಲಿದ್ದದ್ದು ನನ್ನ ನಾಲಿಗೆ ಮಾತ್ರ. ಮತ್ತೆ ತಪ್ಪು ಅರ್ಥ ಕಲ್ಪಿಸಿಕೊಳ್ಳಬೇಡಿ. ನಾನು ದೀರ್ಘವಾಗಿ, ಸುಲಲಿತವಾಗಿ ಇಂಗ್ಲಿಷ್ ಮಾತನಾಡುತ್ತೇನೆ ಎಂದು ಹೇಳಿದೆ.

ನಾನು ಮಾತನಾಡುವುದಕ್ಕೂ ಮೊದಲೇ ಸರಿತಾ ಬಾಯಿ ತೆರೆದಳು. ಅವಳು ತನ್ನನ್ನು ನನ್ನ ತಂಗಿ ಎಂದಳು.

"ನೀವು ಅಕ್ಕನೋ, ತಂಗಿಯೋ?" ದೇವ ಪ್ರಕಾಶರು ಕೇಳಿದರು.

ನಾನು ಅಕ್ಕ ಎಂದು ಹೇಳುವವನಿದ್ದೆ, ಆದರೆ ಆಗಲೇ ಸರಿತಾ 'ತಂಗಿ' ಎಂದಳು.

ನಾನು ನನಗೆ ಮಾತನಾಡಲು ಅವಕಾಶ ಕೊಟ್ಟಷ್ಟೇ ಮಾತನಾಡಿದೆ.

ನಂತರ ದೇವಪ್ರಕಾಶರ ಮಗಳು ಎದುರಿಗೆ ಬಂದಳು. ನಾನು ಅಂಕುಶನಿಗೆ ಯೋಚಿಸಿದಂತೆಯೇ ಇದ್ದಳು. ನನ್ನ ತಂಗಿ ಅಂದರೆ ಸರಿತಾ ಅವಳನ್ನು ನೋಡಿದೊಡನೆಯೇ ಮಿಡಲ್ ಕ್ಲಾಸ್‌ನ ಪ್ರಶ್ನೆಗಳನ್ನು ಕೇಳಲು ಆರಂಭಿಸಿದಳು:

ನಿನಗೆ ಅಡುಗೆ ಮಾಡಲು ಬರುವುದೇ?

ಹಾಡು ಹೇಳ್ತೀಯ?

ಕಾಲೇಜಿನಲ್ಲಿ ಎಷ್ಟು ಮಾರ್ಕ್ಸ್ ಬಂದಿದ್ದವು?

ಮದುವೆಯಾದ ನಂತರ ನೌಕರಿಗೆ ಹೋಗ್ತೀಯ?

ನಿಮ್ಮ ತಾಯಿ ಹೋದ ನಂತರ ಮನೆಯನ್ನು ನೋಡಿಕೊಳ್ಳುವವರು ಯಾರು?

ತಾಯಿಗೆ ಏನಾಗಿತ್ತು?

ಅವರಿಗೆ ಕಾಯಿಲೆ ಇತ್ತೆ?

ಹುಡುಗಿಯ ಮುಖದಲ್ಲಿ ನಿರಾಸೆ ಕವಿಯಿತು. ಅವಳು ಮೆಲ್ಲನೆ ಹೇಳಿದಳು, "ಆಂಟಿ, ಸಾರಿ. ನಾನು ಇಂಥ ಪ್ರಶ್ನೆಗಳಿಗೆ ಉತ್ತರಿಸಲಾರೆ."

ಅವಳು ಎದ್ದು ಹೊರಡಲು ಅನುವಾದಾಗ ಅವರ ತಂದೆ ಅವಳ ಕೈಹಿಡಿದು ತಮ್ಮ ಬಳಿ ಕೂರಿಸಿಕೊಂಡರು, ನಂತರ ನನ್ನನ್ನು ನೋಡುತ್ತಾ ಹೇಳಿದರು, "ನೀವು ತುಂಬಾ ವರ್ಷಗಳಿಂದ ದೇಶದಿಂದ ಹೊರಗಿದ್ದೀರಿ ಎಂದು ಲಾಲಾ ಹೇಳಿದ್ದ. ನಿಮ್ಮ ಮಗ ಮರ್ಚೆಂಟ್ ನೇವಿಯಲ್ಲಿದ್ದಾನೆ. ನಿಮ್ಮ ಯೋಚನೆಗಳು ಬೇರೆ ಎಂದು ನಾವು ಯೋಚಿಸಿದ್ದೆವು. ನೋಡಿ, ನಾನು ನನ್ನ ಮಗಳನ್ನು ತುಂಬಾ ಪ್ರೀತಿಯಿಂದ ಬೆಳೆಸಿದ್ದೇನೆ, ತನಗೆ ಬದುಕಿನಲ್ಲಿ ಏನು ಬೇಕೆಂದು ಅವಳಿಗೆ ಗೊತ್ತಿದೆ. ಕ್ಷಮಿಸಿ, ತನ್ನ ಅಭಿಪ್ರಾಯಗಳನ್ನು ಬದಿಗೊತ್ತಿ ನಿಮ್ಮಂಥವರ ಅಭಿಪ್ರಾಯಗಳೊಂದಿಗೆ ಒಪ್ಪಂದ